## ದಕ್ಕಿಲ್ಲದ ಕಥೆ

ಅಗ್ನಿಸಾಕ್ಷಿ ಧಾರಾವಾಹಿಯನ್ನು ಹೇಗೆ ಮುಗಿಸಬೇಕೆಂದು ತಿಳಿಯದೇ ನಿರ್ದೇಶಕರು ಒದ್ದಾಡುತ್ತಿರುವುದು ಕಾಣಿಸುತ್ತಿದೆ. ಆಯುಷಿಯ ಸನ್ನೆಗಳಿಗೆ 101ನೇ ಸಾರಿಯೂ ಇವಳೇನು ಮಾತಾಡುತ್ತಾಳೋ ತಿಳಿಯುತ್ತಿಲ್ಲ ಎಂದು ಸನ್ನಿಧಿ, ಅಂಜಲಿ, ಹೇಳುತ್ತಾರೆ. ದಯವಿಟ್ಟು ಮೈಸೂರಿನ ವಾಕ್ ಮತ್ತು ಶ್ರವಣ ಕೇಂದ್ರಕ್ಕೆ ಆಯುಷಿಯನ್ನು ಕರೆದುಕೊಂಡು ಹೋಗಿ, ಇದರಿಂದಲಾದರೂ ಆಯುಷಿ ಮತ್ತು ಹಲವರಿಗೆ ಉಪಕಾರವಾಗುತ್ತದೆ. ಅವಳ ಸನ್ನೆಯನ್ನು ಅಲ್ಲಿ ಅರ್ಥ ಮಾಡಿಕೊಂಡ ಪರಿಣಿತರು ಸಮಸ್ಯೆ ಬಗೆಹರಿಸುತ್ತಾರೆ.

—ತಾರಾ ಪ್ರಸಾದ್, ಶಿವಮೊಗ್ಗ

## ಕೊನೆಗಾಣಿಸಿ

ಕನ್ನಡ ಕಲರ್ ಚಾನಲ್‌ನಲ್ಲಿ ಪ್ರಸಾರವಾಗುತ್ತಿರುವ 'ಪುಟ್ಟ ಗೌರಿ ಮದುವೆ' ನಿರ್ದೇಶಕರು ವೀಕ್ಷಕರನ್ನು ಮೂರ್ಖರೆಂದು ಭಾವಿಸಿದ್ದಾರೆ. ಧಾರಾವಾಹಿಯ ಉದ್ದಕ್ಕೂ ನಮ್ಮನ್ನು ಮೂರ್ಖರನ್ನಾಗಿಸಲು ಪ್ರಯತ್ನಿಸಿದ್ದಾರೆ. ಇನ್ನು ಈ ಧಾರಾವಾಹಿಯಲ್ಲಿ ಏನೂ ಉಳಿದಿಲ್ಲ. ಮತ್ತೆ ವೀಕ್ಷಕರನ್ನು ಮೂರ್ಖರನ್ನಾಗಿ ಮಾಡದೆ ಪುಟ್ಟಗೌರಿ ಮದುವೆಗೆ ಮಂಗಳ ಹಾಡಿರಿ.

—ಜಿ. ಅನಂತನಾರಾಯಣಸ್ವಾಮಿ, ತುಮಕೂರು

## ಕಳಪೆ ನಿರೂಪಣೆ

ನಿರೂಪಕಿಯರು ನೋಡುವ ಪ್ರೇಕ್ಷಕರಿಗೆ ಆದರ್ಶವಾಗುವಂತಹ, ಮಾದರಿಯಾಗುವಂತಹ ಸಂಭಾಷಣೆ ಬಳಕೆ ಮಾಡಬೇಕು. ಪ್ರಜ್ಞಾವಂತಿಕೆ ಮೂಡಿಸುವ ಜವಾಬ್ದಾರಿ ಪ್ರತಿ ಚಾನಲ್‌ಗಳ ಕಾರ್ಯಕ್ರಮವನ್ನು ನಿರೂಪಿಸುವ ನಿರೂಪಕರ ಮೇಲೆ ಇದೆ. ಆದರೆ ಇತ್ತೀಚೆಗೆ ಅತ್ಯುತ್ತಮ ನಿರೂಪಣೆಯಲ್ಲಿ ಹೆಸರು ಮಾಡಲು ಹೊರಟಿರುವ ಅನುಶ್ರೀ ಅಶ್ಲೀಲ ಪದಗಳ ಬಳಕೆ ಮಾಡಿ ಹಾಸ್ಯ ಉಕ್ಕಿಸುತ್ತಿದ್ದಾರೆ. ಅಂತಹ ಪದಗಳ ಬಳಕೆ ಸಮಂಜಸವಲ್ಲ.

—ಮಾಂತೇಶ ಬಾಗೇವಾಡಿ, ಬಾಗಲಕೋಟ

ವಾರದ ಪತ್ರ

## ಎಳೆಯರಿಗೆ ಹಿತವಾಗಲಿ

ಇತ್ತೀಚಿನ ಧಾರಾವಾಹಿಗಳಲ್ಲಿ ಮಕ್ಕಳನ್ನು ಪ್ರಮುಖ ಪಾತ್ರಧಾರಿಗಳನ್ನಾಗಿ ಮಾಡಿಸಿ ಅವರಿಂದ ದೊಡ್ಡ ದೊಡ್ಡ ಮಾತಾಡಿಸುವುದು ಎಷ್ಟು ಸಮಂಜಸ? ಪ್ರೀತಿ ಪ್ರೇಮದ ಬಗ್ಗೆ ವ್ಯಾಖ್ಯಾನ. ಸಂಸಾರದ ಗುಟ್ಟಿನ ಪ್ರಶ್ನೆ ಕೇಳುವುದು ದೆವ್ವ ಭೂತದ ಬಗ್ಗೆ ಎಳೆಯರನ್ನು ಹಿಂಸಿಸುವುದು ಇವೆಲ್ಲಾ ಯಾವ ಪುರುಷಾರ್ಥಕ್ಕೆ? ಮಕ್ಕಳಿಗೆ ಒಳ್ಳೆಯ ಮಾರ್ಗದರ್ಶನದ ಬಗ್ಗೆ ಹೇಳುವುದುಬಿಟ್ಟು ಮನೆ ಒಡೆಯುವುದು, ಮನೆ ಬಿಟ್ಟು ಹೋಗುವುದು. ದ್ವೇಷ ದರ್ಪ ಬಿತ್ತುವುದು ನ್ಯಾಯವೇ? ಧಾರಾವಾಹಿಗಳಿಗೆ ಕಥೆ ಸಂಭಾಷಣೆ ಬರೆಯುವವರು ಸಮಾಜದ ಸ್ವಾಸ್ಥದ ಜತೆಗೆ ಎಳೆಯ ಮನಸುಗಳಿಗೆ ಹಿತವಾಗುವ ಅವರುಗಳ ಬದುಕು ವಿಕಸಿಸುವ ಬಗ್ಗೆ ಲೇಖನಿಯನ್ನು ಓಡಿಸಬೇಕು. ತನಗೆ ತೋಚಿದ್ದೇ ಲೇಖನಿಯಲ್ಲಿ ಮೂಡಿದ್ದೇ ನಿಜ ಎಂಬುದಾದರೆ ಕೌರ್ಯ ಹಿಂಸೆ ತುಂಬಿರುವ ಸಮಾಜ ಇನ್ನಷ್ಟು ವ್ಯಗ್ರವಾಗಬಹುದು.

—ಬಿ.ಎಸ್. ಚಂದ್ರಶೇಖರ್, ಬೆಂಗಳೂರು

## ಶೀತಪೀಡಿತ.. ಅಳುಬುರುಕಿ...

ಮನೆದೇವ್ರುನಲ್ಲಿ ಶೀತಪೀಡಿತ ನಾಯಕನನ್ನು ಅಳುಮುಂಜಿ ನಾಯಕಿಯನ್ನೂ ನೋಡಬಹುದು. ವಿಚಿತ್ರವೆಂದರೆ ನಾಯಕನ ಶೀತದಿಂದಾಗಿಯೇ ನಾಯಕಿ ಸಿಕ್ಕಿದ್ದು. ಈತನ ಶೀತಕ್ಕೆ ಮೂಗು ಒರೆಸಿಕೊಳ್ಳಲು ನಾಯಕಿಯ ಖರ್ಚೀಫೇ ಬೇಕಾಯಿತು. ಕಡೆಗೆ ಅದು ಪ್ರೇಮಕ್ಕೆ ತಿರುಗಿತು. ಆಗಿನಿಂದ ನಾಯಕನ ಶೀತಲ ಯುದ್ಧ ನಡೆದಿದೆ. ಜಯರಾಮಗೌಡ್ರಲ್ಲಿ ರಣದೀರ ಕಂಠೀರವನ ಕಳೆ ನೋಡಬಹುದು. ಲಾವಾರಸದಂತೆ ಕುದಿಯುವುದನ್ನು ನೋಡಬಹುದು. ಅದಕ್ಕೆ ಅನು ತುಪ್ಪವೂ ಸೇರಿದೆ. ರೋಹಿಣಿ ಸಾವು ಹೃದಯ ಕಲಕುವಂತಿದೆ. ಇವರ ಮನೋಜ್ಞ ಅಭಿನಯ ಅವಿಸ್ಮರಣೀಯ. ಮಾರಿಯ ಮಾದಕ ಕಾಲ್ಗೇಟ್ ನಗೆ ಇದೆ. ದೊಡ್ಮನೆ ರೋಹಿಣಿ ಗಂಡ, ಬಂಧು ಬಳಗದವರಿಲ್ಲದೆ ಅಂತ್ಯಕ್ರಿಯೆಗೆ ಈಡಾದುದು ವಿಶೇಷ. ಹಾಗೆ ಆಕೆ ಸತ್ತಳೆಂದು ಮನೆ ಮಂದಿಯೆಲ್ಲ ತಿಳಿದುಕೊಳ್ಳಲಿ ಎಂದು ಫೋಟೋ ಹಾಕಿದುದು ವಿಶೇಷ.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಕಲರ್ಸ್ ಮೃಗಾಲಯ

ಒಂದು ಕಾಲದಲ್ಲಿ ಸ್ತ್ರೀ ಎಂದರೆ ಲಕ್ಷ್ಮಿ, ಮನೆಯ ಯಜಮಾನಿತಿ. ಹೀಗೆ ಗೌರವವಾಗಿ ಕರೆಯುತ್ತಿದ್ದರು. ಆದರೆ ಈಗ ಸ್ವಾತಂತ್ರ್ಯ ಸ್ವೇಚಾಚಾರ ಅನ್ನುವ ಮಟ್ಟಕ್ಕೆ ಇಳಿಸಿದ್ದಾರೆ. ಗಂಡಸರು, ಹೆಂಗಸು ಎನ್ನುವ ಭೇದವೇ ಇಲ್ಲ. ಗೌರವಾದರಗಳಂತೂ ಇಲ್ಲವೇ ಇಲ್ಲ. ಇದಕ್ಕೆ ಉದಾಹರಣೆ ಬಿಗ್‌ಬಾಸ್. 'ಸುಧಾ'ದಲ್ಲಿ ನೀವು ಕೇಳಿದಿರಿ ಅಂಕಣದಲ್ಲಿ ಒಂದು ಪ್ರಶ್ನೆ ಕೇಳಿದ್ದಾರೆ. 'ಫೇಸ್ ಬುಕ್ಕಿಗೂ ಬಿಗ್‌ಬಾಸ್ ಮನೆಗೂ ಇರುವ ವ್ಯತ್ಯಾಸವೇನು?' ಅದಕ್ಕೆ ರಾಮ್ 'ಒಂದು ಒಂದೇ ಬಣ್ಣದ ಪಕ್ಷಿಗಳ ಗೂಡು. ಇನ್ನೊಂದು ವಿವಿಧ ಪ್ರಾಣಿಗಳ ಮೃಗಾಲಯ' ಎಂದು ಉತ್ತರಿಸಿದ್ದಾರೆ.

ಇಲ್ಲಿ ಬರುವವರಿಗೆ ತಂದೆ, ತಾಯಿ, ಗಂಡ, ಅತ್ತೆ, ಮಾವ, ಬಂಧು ಬಳಗ ಯಾರೂ ಇಲ್ಲವೆಂದು ಕಾಣುತ್ತೆ. ಇದ್ದರೆ ಅವರೆಲ್ಲರೂ ಟಿವಿ ನೋಡುತ್ತಿರಬಹುದು. ಗಂಡು– ಹೆಣ್ಣು ಒಬ್ಬರ ಮೇಲೊಬ್ಬರು ಬಿದ್ದು ಜಗಳಾಡುವುದು, ಬಡಿಯುವುದು, ಅಶ್ಲೀಲ ಮಾತು. ಇದೇನು ನಮ್ಮ ಸಂಸ್ಕೃತಿಯೇ? ಇವರಿಗೆ ಹೇಳುವವರು ಕೇಳುವವರು ಯಾರೂ ಇಲ್ಲ. ಸಮಾಜ ಹಾಳುಮಾಡುವ ಒಂದು ಮನೆ. ಪ್ರಥಮ ಮತ್ತು ಶಾಲಿನಿಯ ಜಗಳವಂತೂ ಅತಿರೇಕಕ್ಕೆ ಮುಟ್ಟಿ ಒಂದು ವಾರಗಟ್ಟಲೇ ಬಾಯಿನೋವು ಮಾಡಿಕೊಂಡರು ಇದೆಲ್ಲ ಯಾತಕ್ಕೆ! ಏನು ಸಾಧಿಸಿದಂತಾಯಿತು? ಸರಿಯಾಗಿ ತಂದೆ, ತಾಯಿ, ಗಂಡ. ಅತ್ತೆ ಮಾವ ಹೇಳಿದಂತೆ ಕೇಳಿ ಸಂಸಾರ ನೆಮ್ಮದಿಯಿಂದ ಮಾಡಬಾರದೇ?

—ರುಕ್ಮಿಣಿ. ಕೃ. ದೇಶಪಾಂಡೆ, ಗೋಕಾಕ

## ನೈಜವಾಗಿದ್ದರೆ ಚೆನ್ನ

ಧಾರಾವಾಹಿಯಾದರೂ ಸ್ವಲ್ಪವಾದರೂ ನೈಜತೆಗೆ ಹತ್ತಿರ ಇರಬೇಕು. ವಾಸ್ತವ ಇದ್ದಾಗ ಮಾತ್ರ ಜನ ಮೆಚ್ಚುತ್ತಾರೆ. ಸಾಯುವ ಸನ್ನಿವೇಶಗಳು, ಅಂತ್ಯಕ್ರಿಯೆ ಸನ್ನಿವೇಶಗಳನ್ನು ಒಂದೊಂದು ವಾರಗಟ್ಟಲೆ ತೋರಿಸಬೇಕಾ? ಜಾಣರ ಪೆಟ್ಟಿಗೆಯಲ್ಲಿ ಇಂತಹ ಅಂಶಗಳನ್ನು ಗುರುತಿಸಲಾಗಿದೆ. ಎಲ್ಲ ಧಾರಾವಾಹಿಗಳ ಬಗ್ಗೆ ಪತ್ರ ಬರೆದು ಪ್ರತಿರೋಧ ವ್ಯಕ್ತಪಡಿಸಿದರೂ, ಕಿರು ತೆರೆಯ ನಿರ್ದೇಶಕರಿಗೆ ಅದರ ಬಗ್ಗೆ ಡೋಂಟ್‌ಕೇರ್.

—ನೀಲಮ್ಮ ಕುಮಾರಪ್ಪ, ರಾಯಚೂರು

## ಬಿಗ್ ಹುಚ್ಚಾಟ

'ಬಿಗ್‌ಬಾಸ್' ಬೋರ್ ಹೊಡೆಸುತ್ತಿದೆ. ಪ್ರತಿಯೊಂದು ಎಪಿಸೋಡ್‌ಗಳಲ್ಲೂ ಮಾತುಗಳು 'ಪ್ರಥಮ'ನಿಗೆ ಸಂಬಂಧಪಟ್ಟಂತೆ ಅನಿಸುತ್ತಿದೆ.

ಪ್ರಥಮ್ ಹುಚ್ಚಾಟ ಎಲ್ಲೆ ಮೀರಿದೆ. ಬರೀ ಗಲಾಟೆ, ಭಂಡತನ, ಕಿರುಚಾಟ, ಬೇರೆಯವರ ಬಗ್ಗೆ ಕೀಳಾಗಿ ಮಾತನಾಡುವುದನ್ನೇ ತನ್ನ ಬಂಡವಾಳ ಮಾಡಿಕೊಂಡಿದ್ದಾರೆ.

—ಎಸ್. ವಿಜಯಕುಮಾರಿ, ಬೆಂಗಳೂರು, ಸುಶ್ಮಿತಾ ಮನ್ನಂಗಿ.

## ಅಕ್ಕಿ ನಷ್ಟ!

ರಾಧಾ ರಮಣ ಧಾರಾವಾಹಿಯ ಜಾಹೀರಾತನ್ನು ಕೆಲವು ಪತ್ರಿಕೆಗಳಲ್ಲಿ ಪ್ರಕಟಿಸಿ ಅದರೊಡನೆ ಅಕ್ಷತೆ ಇರುವ ಸಣ್ಣ ಪ್ಲಾಸ್ಟಿಕ್ ಕವರನ್ನೂ ಅಂಟಿಸಲಾಗಿದೆ. ಲಕ್ಷಾಂತರ ಇಂತಹ ಕವರುಗಳಲ್ಲಿರುವ ಅಕ್ಕಿಯ ಪ್ರಮಾಣವೆಷ್ಟಾಯಿತು..?

ಹೊಟ್ಟೆಗಿಲ್ಲದವರಿಗೆ ಆ ಅಕ್ಕಿಯನ್ನು ನೀಡಬಹುದಾಗಿತ್ತಲ್ಲವೇ?

—ಕೊ.ಸು.ನರಸಿಂಹ ಮೂರ್ತಿ, ಮೈಸೂರು